ದಿನಾಂಕಃ 26-07-2023 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು ಃ **1, 2, 7** ರಿಂದ **9** ನೇ ಪ್ರತಿವಾದಿ ಪರ ವಕೀಲರಿಂದ

ಈ ದಾವೆಯನ್ನು ನಾನು ಎಲ್ಲ ಪ್ರತಿವಾದಿಯರ ವಿರುದ್ಧ ಸಲ್ಲಿಸಿದ್ದೇನೆ. ದಾವಾ ಸ್ವತ್ತಿನಲ್ಲಿ ನನಗೆ ಭಾಗ ಕೋರಿ ಈ ದಾವೆ ಸಲ್ಲಿಸಿದ್ದೇನೆ. ಅದನ್ನು ಬಿಟ್ಟು ಬೇರೆ ಪರಿಹಾರ ಕೋರಿಲ್ಲ.

ದಾವೆ ಸಲ್ಲಿಸಲು ಮಾಹಿತಿಯನ್ನು ನಾನು ನಮ್ಮ ವಕೀಲರಿಗೆ ನೀಡಿದ್ದೇನೆ. ನಾನು ವಾದ ಪತ್ರ ತಯಾರಿಸಿದ ನಂತರ ಓದಿ ತಿಳಿದುಕೊಂಡಿದ್ದೇನೆ. ನನ್ನ ತಂದೆ ಲೋಕೋಪಯೋಗಿ ಇಲಾಖೆಯಲ್ಲಿ ಜವಾನ ಕೆಲಸ ಮಾಡುತ್ತಿದ್ದರು. ಆತನಿಗೆ ಯಾವಾಗ ನೌಕರಿ ಬಂದಿತ್ತು ನನಗೆ ಗೊತ್ತಿಲ್ಲ. ಅವರು 1999 ರಲ್ಲಿ ನಿವೃತ್ತಿ ಆಗಿದ್ದಾರೆ. 1 ನೇ ಪ್ರತಿವಾದಿ ಈಗಲೂ ಜೀವಂತ ಇದ್ದಾರೆ ಎಂದರೆ ಸರಿ.

ದಾವಾ ಸ್ವತ್ತನ್ನು ಮೂಲತಃ ನಾರಾಯಣಪ್ಪ ತಂದೆ ನರಸಯ್ಯರವರಿಗೆ ಸೇರಿತ್ತು. ಅದನ್ನು ನಾವು ಖರೀದಿಸಿದ್ದೇವೆ. ಅದರ ಖರೀದಿ ಪತ್ರವನ್ನು ನ್ಯಾಯಾಲಯಕ್ಕೆ ಸಲ್ಲಿಸಿದ್ದೇನೆ ಅದನ್ನು 1992-93 ರಲ್ಲಿ ಖರೀದಿಸಿದ್ದೇವೆ. ಎಲ್ಲರೂ ಸೇರಿ ಖರೀದಿ ಮಾಡಿದ್ದೇವೆ. ಆ ಖರೀದಿ ಪತ್ರದಲ್ಲಿ ನಾನು ಮತ್ತು ಉಳಿದ ಪ್ರತಿವಾದಿಯರು ಎಲ್ಲರೂ ಸೇರಿ ಖರೀದಿ ಹಣವನ್ನು ನೀಡಿ ಖರೀದಿಸಿದ ಬಗ್ಗೆ ನಮೂದಿಸಿದ್ದೇವೆ. ಸಾಕ್ಷಿಗೆ ನಿಪಿ-3 ನ್ನು ತೋರಿಸಿ ಅದೇ ಖರೀದಿ ಪತ್ರ ವೇ ಎಂದು ಪ್ರಶ್ನಿಸಲಾಗಿ ಒಪ್ಪಿಕೊಂಡಿದ್ದಾರೆ ನಿಪಿ-3 ರಲ್ಲಿ ನಾವೆಲ್ಲರೂ ಸೇರಿ ಖರೀದಿ ಮಾಡಿದ್ದೇವೆ ಎಂದು ಬರೆದಿಲ್ಲ, ಆದರೆ ನಾವೆಲ್ಲರೂ ಸೇರಿ ದುಡಿದು ನಮ್ಮ ಹಿರಿಯರಾದ ತಂದೆಯ ಹೆಸರಲ್ಲಿ ಖರೀದಿಸಿದ್ದೇವೆ ಎಂದು ನುಡಿಯುತ್ತಾರೆ.

ನಾನು ದಿಃ 01-08-1969 ರಂದು ಜನಿಸಿರುತ್ತೇನೆ. 3 ನೇ ಪ್ರತಿವಾದಿಗೆ 1993 ರಲ್ಲಿ 18 ವರ್ಷ ವಯಸ್ಸು ಇತ್ತು. 5 ನೇ ಪ್ರತಿವಾದಿಗೆ ಆಗ 35 ವರ್ಷ ವಯಸ್ಸು ಇತ್ತು. ಅವರ ಜನನ ದಿನಾಂಕ ನನಗೆ ಗೊತ್ತಿಲ್ಲ. 6 ನೇಪ್ರತಿವಾದಿ 1978 ರಲ್ಲಿ ಜನಿಸಿರುತ್ತಾರೆ.

ನಿಪಿ-3 ರಂತೆ ಖರೀದಿ ಪತ್ರ ಮಾಡಿಕೊಳ್ಳಲು ಮಾತುಕತೆ ನಮ್ಮ ಮನೆಯಲ್ಲಿ ನಡೆದಿತ್ತು ಆ ನಮ್ಮ ತಂದೆ -ತಾಯಿ, ಅಕ್ಕ ತಂಗಿಯರು, ಅಣ್ಣ ತಮ್ಮಂದಿರು ಮತ್ತು ನಾರಾಯಣಪ್ಪ ರವರು ಇದ್ದರು. ಮರು ವಿಚಾರಣೆ ಇಲ್ಲ. ರೂ.8,000/- ಖರೀದಿ ಮಾತುಕತೆ ಆಯಿತು.

ನನ್ನ ವಾದಪತ್ರದಲ್ಲಿ ನನ್ನ ವಯಸ್ಸು48 ಎಂದು ತೋರಿಸಿದ್ದೇನೆ ಎಂದರೆ ಸರಿ. ನನ್ನ ವಾದ ಪತ್ರದಲ್ಲಿ ನಮೂದಿಸಿದ ನನ್ನ ವಯಸ್ಸಿನ ಪ್ರಕಾರ 1993 ರಲ್ಲಿ ನನಗೆ 26 ವಯಸ್ಸು ಇತ್ತು ಎಂದರೆ ಸರಿ. ನನಗೆ 1999 ರಲ್ಲಿ ನೌಕರಿ ಬಂದಿದೆ. ನಾನು ಬಿ.ಎ. ಡಿಯಡ್ ಓದಿದ್ದೇದೆನೆ. 1988 ರಲ್ಲಿ ನಾನು ಡಿಎಡ್ ಪದವಿ ಮುಗಿಸಿದ್ದೇನೆ. ಆಗ ನನಗೆ ಮನೆಪಾಠ ಹೇಳಿ ಕೊಡುವದರಿಂದ ಮತ್ತು ದರ್ಜಿ ಕೆಲಸದಿಂದ ಆದಾಯ ಬರುತ್ತಿತ್ತು. ಆಗ ನಾನು ಸುಮಾರು 25 ಮಕ್ಕಳಿಗೆ ಮನೆಪಾಠ ಹೇಳಿಕೊಡುತ್ತಿದ್ದೆ. ಆ ಮಕ್ಕಳ ಹೆಸರು ಹೇಳಲಾಗುವುದಿಲ್ಲ, ಮರೆತುಹೋಗಿದೆ. ಆಗ ಪ್ರತಿಮಕ್ಕಳಿಗೆ ಪ್ರತಿ ತಿಂಗಳು ರೂ.50/- ಶುಲ್ಕ ಪಡೆದುಕೊಳ್ಳುತ್ತಿದ್ದೆ . ಮಕ್ಕಳ ಕಡೆಯಿಂದ ಮನೆ ಪಾಠದ ಶುಲ್ಕ ಪಡೆದುಕೊಂಡ ಬಗ್ಗೆ ರಶೀದಿ ನೀಡುತ್ತಿರಲಿಲ್ಲ. ನಾನು ಯಾವುದೇ ಮನೆಪಾಠ ಮಾಡುತ್ತಿರಲಿಲ್ಲ ಹಾಗಾಗಿ ಮಕ್ಕಳಿಗೆ ರಶೀದಿ ನೀಡುತ್ತಿರಲಿಲ್ಲ ಎಂದರೆ ಸರಿ ಅಲ್ಲ.

ನಾನು ದರ್ಜಿ ಕೆಲಸ ಮಾಡುತ್ತೇನೆ ಎಂದು ನನ್ನ ವಾದಪತ್ರದಲ್ಲಿ ಬರೆಸಿದ್ದೇನೆ ಸಾಕ್ಷಿಗೆ ವಾದ ಪತ್ರವನ್ನು ತೋರಿಸಲಾಗಿ ಅದರಲ್ಲಿ ಬರೆದಿಲ್ಲ ಎಂದು ನುಡಿಯುತ್ತಾರೆ

3 ನೇ ಪ್ರತಿವಾದಿಯು 1993 ಮತ್ತು 2015 ರಲ್ಲಿ ದರ್ಜಿ ಕೆಲಸ ಮಾಡುತ್ತಿದ್ದರು. ವಾದಪತ್ರದಲ್ಲಿ ಮೂರನೇ ಪ್ರತಿವಾದಿಯ ಉದ್ಯೋಗ ಮನೆಕೆಲಸ ಎಂದು ಬರೆಸಿದ್ದೇನೆ ಒಂದುವೇಳೆ 3 ನೇ ಪ್ರತಿವಾದಿ ದರ್ಜಿ ಕೆಲಸ ಮಾಡುತ್ತಿದ್ದರೆ ಅದನ್ನು ವಾದ ಪತ್ರದಲ್ಲಿ ನಮೂದಿಸುತ್ತಿದ್ದೆ ಎಂದರೆ ಸರಿ 1993 ಮತ್ತು 2015 ರಲ್ಲಿ 4 ಮತ್ತು 5 ನೇ ಪ್ರತಿವಾದಿಯ ಮನೆಕೆಲಸ ಮಾಡುತ್ತಿದ್ದರು. ಅವರು ಬೇರೆಯವರ ಮನೆಯಲ್ಲಿ ಕೆಲಸ ಮಾಡುತ್ತಿರಲಿಲ್ಲ. ಅವರ ಮನೆಯಲ್ಲಿ ಅವರೇ ಕೆಲಸ ಮಾಡುವುದರಿಂದ ಅವರಿಗೆ ಯಾವುದೇ ಆದಾಯ ಇರುವುದಿಲ್ಲ ಎಂದರೆ, ಅವರ ಗಂಡನ ಕಡೆಯಿಂದ ಹಣ ಪಡೆದುಕೊಂಡು ಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ.

3 ರಿಂದ 5 ನೇ ಪ್ರತಿವಾದಿಯರು ದಾವಾ ಸ್ವತ್ತನ್ನು ಖರೀದಿಸಲು ತಲಾ ರೂ.1,000/- ಕೊಟ್ಟಿರುತ್ತಾರೆ. ನಾನು ರೂ.2,000/- ನೀಡಿರುತ್ತೇನೆ.

1992-93 ರಲ್ಲಿ 1 ನೇ ಪ್ರತಿವಾದಿಗೆ ರೂ.500-600 ಸಂಬಳ ಇತ್ತು. ಈ ಬಗ್ಗೆ ನಾನು ಯಾವುದೇ ದಾಖಲೆಗಳನ್ನು ಹಾಜರಪಡಿಸಿಲ್ಲ. 1992-93 ರಲ್ಲಿ 1 ನೇ ಪ್ರತಿವಾದಿಗೆ ರೂ.10,000/- ಸಂಬಳ ಇತ್ತು ಎಂದರೆ ಸರಿ ಅಲ್ಲ. ದಿಃ 05-06-1992 ರಂದು ನಾನು ರೂ.2000/- 3 ರಿಂದ 5 ನೇ ಪ್ರತಿವಾದಿಯರು ತಲಾ ರೂ.1000/- 1 ನೇ ಪ್ರತಿವಾದಿಗೆ ಕೊಟ್ಟಿರುತ್ತೇವೆ. ಆ ಹಣವನ್ನು ನಿವೇಶನ ಖರೀದಿ ಸಲುವಾಗಿ ನೀಡಿದ್ದೇವೆ. ಆ ಬಗ್ಗೆ ಹಣ ನೀಡಿದ್ದಕ್ಕೆ 1

ನೇ ಪ್ರತಿವಾದಿಯಿಂದ ಯಾವುದೇ ಪತ್ರ ಬರೆಸಿಕೊಂಡಿಲ್ಲ ನಾವು ಹಣ ಕೊಟ್ಟ ರೀತಿಯಲ್ಲಿ ನಿಪಿ-3 ರಲ್ಲಿ ಬರೆಸಿ ಎಂದು 1 ನೇ ಪ್ರತಿವಾದಿಗೆ ಹೇಳಿಲ್ಲ. ನಾವು 1 ನೇ ಪ್ರತಿವಾದಿಗೆ ಹಣ ನೀಡಿದ ಬಗ್ಗೆ ಆತನು ನಮ್ಮ ತಂದೆ ಆಗಿದ್ದರಿಂದ ರಶೀದಿ ಪಡೆದುಕೊಂಡಿಲ್ಲ. ನಾನು ರೂ.2000/- 3 ರಿಂದ 5 ನೇ ಪ್ರತಿವಾದಿಯರು ತಲಾ ರೂ.1000/- 1 ನೇ ಪ್ರತಿವಾದಿಗೆ ನಿವೇಶನ ಖರೀದಿಸಲು ಕೊಟ್ಟೆವು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿ ಅಲ್ಲ.

ನನ್ನ ವಾದಪತ್ರದಲ್ಲಿ ನಾನು 1988 ರಲ್ಲಿ ಮನೆಪಾಠ ಮಾಡುತ್ತಿದ್ದೆ ಎಂದು ಬರೆಸಿದ್ದೇನೆ. ನನ್ನ ವಾದಪತ್ರದ ಯಾವ ಖಂಡಿಕೆಯಲ್ಲಿ ಮತ್ತು ಯಾವ ಪುಟದಲ್ಲಿ ಈ ಬಗ್ಗೆ ಬರೆಸಿದ್ದೇನೆ ಎಂದು ನೆನಪಿಲ್ಲ. ನಾನು ಯಾವುದೇ ಮನೆಪಾಠ ಮಾಡುತ್ತಿರಲಿಲ್ಲ, ಹಾಗಾಗಿ ನನ್ನ ವಾದಪತ್ರದಲ್ಲಿ ಬರೆದಿಲ್ಲ ಎಂದರೆ ಸರಿ ಅಲ್ಲ.

ನಿಪಿ-3 ರಂತೆ ಮುನಿಸಿಪಾಲಟಿಯಲ್ಲಿ 1 ನೇ ಪ್ರತಿವಾದಿ ಹೆಸರಲ್ಲಿ ಮ್ಯೂಟೇಶನ್ ಆಯಿತು ಎಂದರೆ ಸರಿ. ಅದಾದನಂತರ 1 ನೇ ಪ್ರತಿವಾದಿಯೇ ಮಾಲೀಕನಿದ್ದ ಮತ್ತು ಆತನೇ ಸ್ವಾಧೀನದಲ್ಲಿದ್ದ ಎಂದರೆ ಸರಿ.

ನನ್ನ ಮದುವೆ 1998 ರಲ್ಲಿ ಆಗಿದೆ. ನನ್ನನ್ನು ಕಾರಟಗಿಗೆ ಮದುವೆ ಮಾಡಿಕೊಟ್ಟಿದ್ದಾರೆ. 3 ನೇ ಪ್ರತಿವಾದಿಯ ಮದುವೆ ಆಗಿರುವುದಿಲ್ಲ. 4 ನೇ ಪ್ರತಿವಾದಿಯ ಮದುವೆಯು 1980 ರಲ್ಲಿ ಆಗಿದೆ. ಅವರನ್ನು ಸಿಂಧನೂರಿನ ಮೆಹಬೂಬ ಕಾಲೋನಿಯಲ್ಲಿ ಮದುವೆ ಮಾಡಿ ಕೊಟ್ಟಿದ್ದಾರೆ. 5 ನೇ ಪ್ರತಿವಾದಿಯ ಮದುವೆಯು 1988-89 ರಲ್ಲಿ ಆಗಿರಬಹುದು. ನಾನು, 4 ಮತ್ತು 5 ನೇ ಪ್ರತಿವಾದಿಯರ ಮದುವೆಯಾದಾಗಿನಿಂದ ನಮ್ಮ ಗಂಡಂದಿರ ಮನೆಯಲ್ಲಿ ಇದ್ದೇವೆ ಎಂದರೆ ಸರಿ. 2 ನೇ ಪ್ರತಿವಾದಿಯ ಮದುವೆಯು 2014 ರಲ್ಲಿ ಆಗಿದೆ. ನಮ್ಮ ಮದುವೆಯಾದ ನಂತರ ದಾವಾ ಸ್ವತ್ತಿನಲ್ಲಿ 1 ನೇ ಪ್ರತಿವಾದಿ, 2 ನೇ ಪ್ರತಿವಾದಿ, ಆತನ ಹೆಂಡತಿ ಮಕ್ಕಳು ಮತ್ತು ನಮ್ಮ ತಾಯಿ ಇರುತ್ತಾರೆ ಎಂದರೆ ಸರಿ. ಈಗಲೂ ಕೂಡಾ ಅವರೇ ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸರಿ.

1 ನೇ ಪ್ರತಿವಾದಿಗೆ ರಕ್ತದೊತ್ತಡ ಮತ್ತು ಸಕ್ಕರೆ ಕಾಯಿಲೆಗಳು ಇವೆ ಎಂದರೆ ಸರಿ ಅಲ್ಲ. 6 ನೇ ಪ್ರತಿವಾದಿಯು 2009 ನೇ ಸಾಲಿನಲ್ಲಿ ಮೃತಪಟ್ಟಿದ್ದಾನೆ. 2 ನೇ ಪ್ರತಿವಾದಿ ಮತ್ತು ಆತನ ಹೆಂಡತಿ ಮಕ್ಕಳು, 1 ನೇ ಪ್ರತಿವಾದಿ ಮತ್ತು 1 ನೇ ಪ್ರತಿವಾದಿಯ ಹೆಂಡತಿಯನ್ನು ನೋಡಿಕೊಳ್ಳುತ್ತಾನೆ ಎಂದರೆ ಸರಿ. ಇಲ್ಲಿಯವರೆಗೆ 2 ನೇ ಪ್ರತಿವಾದಿ ಆತನ ಹೆಂಡತಿ ಮಕ್ಕಳು 1 ನೇ ಪ್ರತಿವಾದಿ ಮತ್ತು ನನ್ನ ತಾಯಿಯನ್ನು ನೋಡಿಕೊಳ್ಳುತ್ತಿದ್ದಾರೆ ಎಂದರೆ ಸರಿ. ನಮ್ಮ ಮದುವೆಯಾದ ನಂತರ 2 ನೇ ಪ್ರತಿವಾದಿಯೇ ನಮ್ಮ ತಂದೆ ತಾಯಿಯನ್ನು ನೋಡಿಕೊಳ್ಳುತ್ತಿದ್ದ ಎಂದರೆ ಸರಿ ಅಲ್ಲ. 3 ನೇ ಪ್ರತಿವಾದಿಯು ಸಹ ನೋಡಿಕೊಳ್ಳುತ್ತಿದ್ದರು ಎಂದು ಸಾಕ್ಷಿ ನುಡಿಯುತ್ತಾರೆ.

2015 ನೇ ಸಾಲಿನಲ್ಲಿ 3 ನೇ ಪ್ರತಿವಾದಿ ದಾವಾ ಸ್ವತ್ತಿನಲ್ಲಿ ಇದ್ದಳು. 2 ನೇ ಪ್ರತಿವಾದಿಯು ನಮ್ಮ ತಂದೆ ತಾಯಿಯನ್ನು ನೋಡಿಕೊಂಡಿದ್ದರಿಂದ ಆತನ ಮೇಲೆ ಪ್ರೀತಿ ವಿಶ್ವಾಸ ಇತ್ತು ಎಂದರೆ ಸರಿ. ಈಗ 3 ನೇ ಪ್ರತಿವಾದಿ 2 ನೇ ಪ್ರತಿವಾದಿಯ ಮನೆಯಲ್ಲಿ ಇರುವುದಿಲ್ಲ. 3 ನೇ ಪ್ರತಿವಾದಿಯು 2 ನೇ ಪ್ರತಿವಾದಿಯ ಮನೆ ಬಿಟ್ಟು 5 ವರ್ಷ ಆಗಿದೆ. 2 ನೇ ಪ್ರತಿವಾದಿ ಆಕೆಗೆ ಕಿರುಕುಳ ಕೊಡುತ್ತಿದ್ದರಿಂದ ಮನೆ ಬಿಟ್ಟಿರುತ್ತಾಳೆ. ಅದರ ಬಗ್ಗೆ ಪೋಲೀಸರಿಗೆ ದೂರು ನೀಡಿಲ್ಲ. 3 ನೇ ಪ್ರತಿವಾದಿಯು ಆಕೆಗೆ 17 ವರ್ಷ ವಯಸ್ಸು ಇರುವಾಗಲೇ ಮನೆ ಬಿಟ್ಟಿರುತ್ತಾಳೆ ಎಂದರೆ ಸರಿ ಅಲ್ಲ. 3 ನೇ ಪ್ರತಿವಾದಿಯು ನಮ್ಮ ತಂದೆ ತಾಯಿಯನ್ನು ನೋಡಿಕೊಳ್ಳುತ್ತಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿ ಅಲ್ಲ.

3 ನೇ ಪ್ರತಿವಾದಿಯು ಈ ಹಿಂದೆ ದಾವಾ ಸ್ವತ್ತಿನಲ್ಲಿ ಭಾಗ ಬೇಕು ಎಂದು ಅಸಲು ದಾವಾ ಸಂಖ್ಯೆ 83/2015 ನ್ನು ದಾಖಲಿಸಿದ್ದರು ಎಂದರೆ ಸರಿ. ಆ ದಾವೆ ವಜಾ ಆಗಿದೆ ಎಂದರೆ ನನಗೆ ಗೊತ್ತಿಲ್ಲ. ಇದೇ ದಾವಾ ಸ್ವತ್ತಿನ ವಿಚಾರವಾಗಿ ಆ ದಾವೆ ಸಲ್ಲಿಸಿದ್ದರು ಎಂದರೆ ಸರಿ. ಅದರಲ್ಲಿ ನಾನು ಮತ್ತು ಉಳಿದ ಪ್ರತಿವಾದಿಯರು ಪಕ್ಷಗಾರರು ಇದ್ದರು ಎಂದರೆ ಸರಿ.

ಸಾಮಾನ್ಯವಾಗಿ ಒಬ್ಬ ಸರ್ಕಾರಿ ನೌಕರ ತನ್ನ ಸಂಬಳದಿಂದ ಮನೆ, ಜಮೀನು ಮತ್ತು ನಿವೇಶನ ಖರೀದಿ ಮಾಡುತ್ತಾರೆ ಎಂದರೆ ಸರಿ. ಅದೇರೀತಿ ಮಕ್ಕಳ ಓದಿಗೋಸ್ಕರ ಮತ್ತು ಆಸ್ತಿ ಖರೀದಿಸಲು ಹಣ ಕೂಡಿ ಇಡುತ್ತಾರೆ ಎಂದರೆ, ಕೆಲವೊಬ್ಬರು ಇಡುತ್ತಾರೆ ಕೆಲವೊಬ್ಬರು ಇಡುವುದಿಲ್ಲ. 1 ನೇ ಪ್ರತಿವಾದಿಯು ತನಗೆ ಬರುವ ಸಂಬಳದಿಂದ ಕೂಡಿ ಇಟ್ಟ ಹಣದಿಂದ ದಾವಾ ಸ್ವತ್ತನ್ನು ಖರೀದಿಸಿದ್ದಾನೆ ಎಂದರೆ ಸರಿ ಅಲ್ಲ. ಒಂದುವೇಳೆ ದಾವಾ ಸ್ವತ್ತನ್ನು ಖರೀದಿಸಲು ನಾನು, 3 ರಿಂದ 5 ನೇ ಪ್ರತಿವಾದಿಯರು ಹಣ ಕೊಟ್ಟಿದ್ದರೆ ನಿಪಿ-3 ರಲ್ಲಿ ಬರೆಸುತ್ತಿದ್ದೆವು ಎಂದರೆ ಸರಿ ಅಲ್ಲ.

ನಾನು ಡಿಎಡ್ ಪದವಿ ಮುಗಿಸಿದಾಗ ನನಗೆ ವ್ಯವಹಾರ ಜ್ಞಾನ ಇತ್ತು. ನಿಪಿ-3 ರಂತೆ ಖರೀದಿ ಮಾಡಿಕೊಳ್ಳುವಾಗ ನಾನು, 3 ರಿಂದ 5 ನೇ ಪ್ರತಿವಾದಿಯರು ಹಣ ನೀಡಿದ ಬಗ್ಗೆ ಅದರಲ್ಲಿ ಬರೆಯಬೇಕು ಎಂದು 1 ನೇ ಪ್ರತಿವಾದಿಯನ್ನು ಕೇಳಿಲ್ಲ. ನಾವು ಯಾವುದೇ ಹಣವನ್ನು ನೀಡದೇ ಇರುವ ಕಾರಣ ನಿಪಿ-3 ರಲ್ಲಿ ನಮ್ಮ ಹೆಸರು ಬರೆಯುವಂತೆ 1 ನೇ ಪ್ರತಿವಾದಿಯನ್ನು ಕೇಳಿಲ್ಲ ಎಂದರೆ ಸರಿ ಅಲ್ಲ.

ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು ಮುಂದೂಡಲಾಯಿತು.

(ನನ್ನ ಉಕ್ತದ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿರುತ್ತಾರೆ)

ಓ ಹೇ ಕೇ ಸರಿ ಇದೆ.

ಪ್ರಧಾನ ಜೆ.ಎಮ್.ಎಫ್.ಸಿ., ಸಿಂಧನೂರು.